*Vol. 3, No. 1, Jan-Jun, 2023* *ISSN 2583-0708*

KUVEMPU UNIVERSITY
THE SOCIAL SCIENCE DIALOGUE
Peer Reviewed Open Access Journal
Prasaranga, Kuvempu University

# ಸಣ್ಣ ಪತ್ರಿಕೆಗಳ ಮೇಲೆ ಕೋವಿಡ್ –19 ಪ್ರಭಾವ

**ಪದ್ಮಾವತಿ ಕೆ.,** ಸಂಶೋಧನಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ,ಶಂಕರಘಟ್ಟ– 577 451, ಶಿವಮೊಗ್ಗ, ಕರ್ನಾಟಕ.

**ಸತೀಶ್‌ಕುಮಾರ್,** ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– 577 451, ಶಿವಮೊಗ್ಗ, ಕರ್ನಾಟಕ.

**ಸಾರಾಂಶ:** ಪತ್ರಿಕೆಗಳು ಸಮಾಜದ ವಿವಿಧ ರಂಗಗಳಲ್ಲಿನ ವಿದ್ಯಮಾನಗಳನ್ನು ತಿಳಿಸುವಲ್ಲಿ ಮತ್ತುಜನಜಾಗೃತಿ ಮೂಡಿಸುವಲ್ಲಿ ಅತ್ಯಂತ ಪ್ರಬಲ ಮತ್ತು ಪ್ರಭಾವಿಯುತ ಸಾಧನಗಳು. ಚೀನಾದ ವುಹಾನ್ ನಗರದಲ್ಲಿ ಡಿಸೆಂಬರ್ 2019 ರಲ್ಲಿ ಮೊದಲು ಕಂಡು ಬಂದ ಕರೋನಾ ಎಂಬ ಸಾಂಕ್ರಮಿಕ ರೋಗ ಇಡೀ ಜಗತ್ತನ್ನೇ ತಲ್ಲಣಗೊಳಿಸಿತು. ಪ್ರಪಂಚವನ್ನೇ ಕೆಲವು ತಿಂಗಳುಗಳ ಕಾಲ ಸ್ತಬ್ದಗೊಳಿಸಿತು. ಜನರನ್ನು ಮನಯಲ್ಲೇ ಬಂಧಿಸಿತು. ನಮ್ಮ ಊಹೆಗೂ ಮೀರಿದ ಪರಿಸ್ಥಿತಿ ಜಗತ್ತಿನಾದ್ಯಂತ ನಿರ್ಮಾಣವಾಯಿತು. ಕೋವಿಡ್–19 ನಂತಹ ಆರೋಗ್ಯ ತುರ್ತು ಪರಿಸ್ಥಿತಿಯಲ್ಲೂ ಸಣ್ಣ, ಮಧ್ಯಮ ಮತ್ತು ದೊಡ್ಡ ಪತ್ರಿಕೆಗಳು ಜನಸಾಮಾನ್ಯರಿಗೆ ಸಕಾಲಕ್ಕೆ ಮಾಹಿತಿಯನ್ನು ಮುಟ್ಟಿಸುವ ಮೂಲಕ ವೃತ್ತಿಪರತೆಯನ್ನು ಕಾಯ್ದುಕೊಂಡವು.ದಿನಪತ್ರಿಕೆಗಳ ಮುಖ್ಯ ಆದಾಯದ ಮೂಲ ಒಂದು ಓದುಗರು, ಮತ್ತೊಂದು ಜಾಹೀರಾತು. ಸಾರಿಗೆ ಸಂಚಾರ ಸ್ಥಗಿತಗೊಳ್ಳುತ್ತಿದ್ದಂತೆ ಪತ್ರಿಕೆಗಳ ಪ್ರಸರಣೆ ಕುಸಿಯಿತು. ಇದರ ಪರಿಣಾಮವಾಗಿ ಪತ್ರಿಕೆಗಳ ಪುಟ ಸಂಖ್ಯೆ ಕಡಿಮೆಯಾಯಿತು. ಪತ್ರಿಕೆಗಳಿಗೆ ಬರುತ್ತಿದ್ದ ಜಾಹೀರಾತುಗಳ ಪ್ರಮಾಣವೂ ಕಡಿಮೆಯಾಯಿತು. ಈ ಸಂದರ್ಭದಲ್ಲಿ ಪತ್ರಿಕೆಗಳು ಆರ್ಥಿಕವಾಗಿ ನಷ್ಟಕ್ಕೊಳಗಾದವು. ಅದರಲ್ಲೂ ಸಣ್ಣ ಪತ್ರಿಕೆಗಳು ಮುದ್ರಣ ಕಾಗದ ಖರೀದಿ ಸಮಸ್ಯೆ, ಪತ್ರಿಕೆ ವಿತರಣೆಯಲ್ಲಿ ತೊಂದರೆ, ಪತ್ರಕರ್ತರಿಗೆ ಸರಿಯಾದ ಸಮಯಕ್ಕೆ ವೇತನ ಪಾವತಿಯಾಗದಿರುವುದು ಸೇರಿದಂತೆ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಈ ಹಿನ್ನಲೆಯಲ್ಲಿ ಕೋವಿಡ್ ಸಂದರ್ಭದಲ್ಲಿ ಸಣ್ಣ ಪತ್ರಿಕೆಗಳು ನಿರ್ವಹಿಸಿದ ಪಾತ್ರ ಮಹತ್ವದ್ದಾಗಿದೆ.

**ಮುಖ್ಯಪದಗಳು:** ಸಣ್ಣ ಪತ್ರಿಕೆಗಳು, ಕೋವಿಡ್19, ಆರೋಗ್ಯ ಜಾಗೃತಿ, ಪ್ರಸರಣೆ, ಪತ್ರಕರ್ತರು

Fulltextofthispapercanbedownloadedonlinehttps://www.thesocialsciencedialogue.com/archive